ಶ್ರೀ ಡಿ. ಟಿ. ಮಾಯಣ್ಣ :—ಸ್ವಾಮಿ, ಇಲ್ಲಿ ನನಗೆ ಕೊಟ್ಟಿರುವ ಲಿಸ್ಟ್ ಪ್ರಕಾರ ೬೦ ಗ್ರಾಮಗಳಿವೆ. ಅವುಗಳನ್ನೆಲ್ಲಾ ಎಷ್ಟು ದಿವಸದಲ್ಲಿ ಮುಗಿಸುತ್ತೀರಾ ಎಂದರೆ ತಾಲ್ಲೂಕು ಬೋರ್ಡಿನವರು ಕೆಲವು ಗ್ರಾಮ ತೆಗೆದುಕೊಂಡಿದ್ದಾರೆಂದು ಹೇಳಿದ್ದೀರಾ. ಈಗ ಸರ್ಕಾರದಿಂದ ದುಡ್ಡು ಒದಗಿಸಿ ಈ ೬೦ ಗ್ರಾಮಗಳಿಗೂ ರಸ್ತೆಗಳನ್ನು ಮಾಡಿಸುತ್ತೀರಾ?

ಶ್ರೀ ಕೆ. ಪ್ರಭಾಕರ್ :—ಈ ಗ್ರಾಮಗಳಿಗೆಲ್ಲಾ ಸರ್ಕಾರದವರೇ ಮಾಡುವುದಿಲ್ಲ. ಪ್ರತಿ ತಾಲ್ಲೂಕು ಬೋರ್ಡ್‌ನವರು ಕೂಡ ಹಣ ಒದಗಿಸಿದ್ದಾರೆ. ಸ್ಥಳಾವಮಾನ ಅನುಸರಿಸಿ ಮಾಡುವುದೂ ತಾಲ್ಲೂಕು ಬೋರ್ಡ್‌ನವರಿಗೆ ಸೇರಿದ್ದು.

Bunk Shops at Majestic Bus Stand

771. SRI T. R. SHAMANNA (Basavangudi) :—Will the Minister for Municipal Administratian be pleased to state :—

(a) whether it has come to the notice of the Government that large number of Bunk Shops have come up at the Majestic, Bangalore City Bus Stand in Tank Bund Road ;

(b) are they authorised or unauthorised ;

(c) will the Government allow these ugly Bunk shops permanently ?

SRI H. C. SRIKANTAIAH (Minister for Municipal Administration).—

(a) Yes.

(b) Some are authorised and some are unauthorised.

(c) No. Alternative land for shifting of these venders is being examiend.

ಶ್ರೀ ಟಿ. ಆರ್. ಶಾಮಣ್ಣ :—ಸ್ವಾಮಿ, ಈಗ ಬೆಂಗಳೂರು ಟ್ಯಾಂಕ್‌ಬಂಡ್ ರಸ್ತೆಗೆ ಒಂದು ಕಡೆ ಬಸ್ ನಿಲ್ದಾಣ, ಮತ್ತೊಂದು ಕಡೆ ರೈಲ್ವೆ ನಿಲ್ದಾಣ ಇರುವುದರಿಂದ ಹೊರಗಿನಿಂದ ಬರತಕ್ಕ ಪ್ರಯಾಣಿಕರು ಬೆಂಗಳೂರಿಗೆ ಬಂದ ತಕ್ಷಣ ಅಸಹ್ಯಕರವಾದ ಪೆಟ್ಟಿಗೆ ಅಂಗಡಿಗಳನ್ನು ನೋಡಿ ಬೆಂಗಳೂರು ಆಂದ ಚಿಂದದ ಬಗ್ಗೆ ತಮ್ಮ ಅಭಿಪ್ರಾಯ ವ್ಯಕ್ತಪಡಿಸುವುದಕ್ಕೆ ಬೇಜಾರಾಪಡುವುದಿಲ್ಲವೇ?

†ಶ್ರೀ ಹೆಚ್. ಸಿ. ಶ್ರೀಕಂಠಯ್ಯ :—ಅಧ್ಯಕ್ಷರೆ, ಈ ಪೆಟ್ಟಿಗೆ ಅಂಗಡಿಗಳು ಬಹಳ ಹೆಚ್ಚಿನ ಸಂಖ್ಯೆಯಲ್ಲಿ ಆಗಿವೆ. ಆದರಲ್ಲಿ ಕೆಲವಕ್ಕೆ ಪರವಾನೆ ಪಡೆದಿದ್ದಾರೆ, ಇನ್ನು ಕೆಲವಕ್ಕೆ ಪರವಾನೆ ಪಡೆದಿಲ್ಲ. ಅನ್ ಅಥರೈಸ್ಡ್ ಆಗಿ ಕಟ್ಟಿಸಿದ್ದಾರೆ. ಈಗ ನಾವು ಅವರನ್ನು ಎವಿಕ್ಟ್ ಮಾಡಿಸಿ ಬೇರೆ ಸ್ಥಳದಲ್ಲಿ ನಿವೇಶನ ಕೊಡಬೇಕೆಂದು ನಾವು ಕೆ.ಎಸ್.ಆರ್.ಟಿ.ಸಿ. ಅವರ ಹತ್ತಿರ ೬ ಅಡಿ ಮತ್ತು ೮ ಅಡಿ ಸೈಜಿನ ೬೭ ಸೈಟುಗಳನ್ನು ಮಿಂಗಡಿಸಲಿಕ್ಕೆ ಕೇಳಿದ್ದೆವು. ಈಗ ಕೆ.ಎಸ್.ಆರ್.ಟಿ.ಸಿ. ಅವರು ನಮಗೆ ಬೇಕು ಎಂದು ಕೊಟ್ಟಿಲ್ಲ. ಈಗ ಬೇರೆ ಕಡೆ ರೀಹೆಬಿಲಿಟೇಟ್ ಮಾಡಲಿಕ್ಕೆ ಸ್ಥಳವನ್ನು ಪರಿಶೀಲನೆ ಮಾಡಿ ಅವರನ್ನು ಖಾಲಿ ಮಾಡಿಸಲಿಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಟಿ.ಆರ್. ಶಾಮಣ್ಣ :—ಸ್ವಾಮಿ, ಕಳೆದ ಎರಡು ವರ್ಷಗಳ ಕೆಳಗೆ ಅಲ್ಲಿದ್ದಂತಹ ಪೆಟ್ಟಿಗೆ ಅಂಗಡಿಗಳನ್ನು ಕಿತ್ತುಹಾಕಿದಿರಿ. ಆದು ಆದಮೇಲೆ ಹೊಸದಾಗಿ ಅನೇ ಪೆಟ್ಟಿಗೆ ಅಂಗಡಿಗಳು ಬಂದಿರುವುದು ಸರ್ಕಾರದ ಗಮನದಲ್ಲಿದೆಯೇ? ಈ ಪೆಟ್ಟಿಗೆ ಅಂಗಡಿಗಳಿಗೆ ಪರವಾನೆ ಕೊಡತಕ್ಕವರು ಕಾರ್ಪೊರೇಷನ್ನಿನವರೋ, ಬಿ.ಡಿ.ಎ. ಅವರೋ ಅಥವಾ ಕೆ.ಎಸ್.ಆರ್.ಟಿ.ಸಿ. ಅವರೋ ತಿಳಿಸಬೇಕು?

ಶ್ರೀ ಹೆಚ್. ಸಿ. ಶ್ರೀಕಂಠಯ್ಯ :—ಇವೊತ್ತು ಟ್ರಾಂಕ್‌ಬಾಡ್ ರಸ್ತೆಯಲ್ಲಿ ಉದ್ದಕ್ಕೂ ಅಂಗಡಿಗಳು ಬಂದಿರುವುದನ್ನು ನಾನು ಸಹ ನೋಡಿದ್ದೇನೆ. ಅವು ಅಲ್ಲಿರತಕ್ಕದ್ದು ಯೋಗ್ಯವಲ್ಲ ಎಂದು ನಾನು ಯೋಚನೆ ಮಾಡಿದ್ದೇನೆ. ಏಕೆಂದರೆ ಅಲ್ಲಿ ಬಸ್ ನಿಲ್ದಾಣ, ರೈಲ್ವೆ ನಿಲ್ದಾಣ ಮತ್ತು ಜನಸಂದಣಿ ಜಾಸ್ತಿ ಇರುತ್ತದೆ. ಈಗ ಆ ಸ್ಥಳದಲ್ಲಿ ಒಂದು ಓಪನ್ ಕ್ಯಸ್ ತರಹ ಆಗಿದೆ ಆದುದರಿಂದ ಆದಷ್ಟು ಜಾಗ್ರತೆ ಅಲ್ಲಿಂದ ತೆಗೆಸಲಿಕ್ಕೆ ಪ್ರಯತ್ನ ಮಾಡುತ್ತೇನೆ. ಅವರಿಗೆ ಬೇರೆ ನಿವೇಶನ ಕೊಡುವುದಕ್ಕೆ ವಿಪ್ರಾಡು ಮಾಡಿ ನಂತರ ಎವಿಕ್ಟ್ ಮಾಡಿಸುತ್ತೇನೆ.

ಶ್ರೀ ಕೆ. ಲಕ್ಷ್ಮಣ :—ಸ್ವಾಮಿ, ಪೆಟ್ಟಿಗೆ ಅಂಗಡಿ ಕೆಳಕಾಗಿದ್ದರು ಅಲ್ಲಿ ಮಾರತಕ್ಕ ಹಣ್ಣು ಬಹಳ ಚೆನ್ನಾಗಿ ರುಚಿಯಾಗಿರುತ್ತದೆ. ಇವೊತ್ತು ರೈಲಿನಲ್ಲಿ ಬಸ್ಸಿನಲ್ಲಿ ಬರತಕ್ಕವರು ಸಿಟಿ ಮಾರ್ಕೆಟ್ಟಿನಲ್ಲಿ ಹಣ್ಣು ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಮಾನ್ಯ ಮಂತ್ರಿಗಳು ಏನಾದರೂ ಅಲ್ಲಿಂದ ಷಿಪ್ಟ್ ಮಾಡುವುದಾದರೆ ಅವರಿಗೆ ಬಸ್ ನಿಲ್ದಾಣ, ರೈಲ್ವೆ ನಿಲ್ದಾಣದ ಹತ್ತಿರವೇ ಅವರಿಗೆ ಜಾಗ ಕೊಡಬೇಕು. ತಾವು ಸಿಟಿ ಮಾರ್ಕೆಟ್ ಹತ್ತಿರ ತೆಗೆದುಕೊಂಡು ಹೋಗಿ ಹಾಕಿದರೆ ಅನುಕೂಲ ಇಲ್ಲ. ಅವರಿಗೆ ಕೊಡುವಂತಹ ನಿವೇಶನದ ಜಾಗ ಬಸ್‌ನಿಲ್ದಾಣ, ರೈಲ್ವೆನಿಲ್ದಾಣದ ಹತ್ತಿರವೇ ಇರಬೇಕು ಎಂದು ಹೇಳುತ್ತೇನೆ

ಶ್ರೀ ಹೆಚ್. ಸಿ. ಶ್ರೀಕಂಠಯ್ಯ :—ಅದನ್ನು ನಾನು ಪರಿಶೀಲನೆ ಮಾಡುತ್ತೇನೆ. ಈಗ ಅಲ್ಲಿ ಏನ ಅಂಗಡಿ ಮಳಿಗೆಗಳನ್ನು ಕಟ್ಟಿದ್ದಾರೆ ಅಲ್ಲಿ ಕಾರ್ಪೊರೇಷನ್ನಿನಿಂದಲೇ ಉದ್ಘಕ್ಕೂ ಮಳಿಗೆಗಳನ್ನು ಹಾಕಿಸಿ ಈಗ ಯಾರು ಅಲ್ಲಿ ಇದ್ದಾರೆ ಅವರಿಗೆ ಕೊಡುವ ಅಭಿಪ್ರಾಯದಲ್ಲಿ ಕಾರ್ಪೊರೇಷನ್ ಕಮಿಷನರ್ ಅವರಿಗೆ ಪರಿಶೀಲನೆ ಮಾಡಲಿಕ್ಕೆ ಹೇಳಿದ್ದೇನೆ. ಈಗ ಅಲ್ಲಿ ಉತ್ತಮವಾದ ರೀತಿಯಲ್ಲಿ ಅಂಗಡಿಗಳನ್ನು ಕಟ್ಟಿಲ್ಲ. ಇವೊತ್ತು ಅಲ್ಲಿ ಯಾರೇ ಬಂದರೂ ಆ ಪೆಟ್ಟಿಗೆ ಅಂಗಡಿಗಳ ಹಿಂದೆ ಯೂರಿನ್‌ಗೆ ಕಕ್ಕಸ್ಸಿಗೆ ಹೋಗುವುದು. ಇದೆ. ಅಲ್ಲಿ ಬಹಳ ದುರ್ವಾಸನೆ ಇದೆ. ಅವರನ್ನು ಯಾವರೀತಿ ರೀಹ್ಯಾಬಿಲಿಟೇಟ್ ಮಾಡಬೇಕು. ಕಾರ್ಪೊರೇಷನ್ ಕಡೆಯಿಂದ ಅಲ್ಲಿರತಕ್ಕವರಿಗೆ ಜಾಗ ಕೊಡತಕ್ಕದ್ದು ಒಂದು. ಅವರಿಗೆ ಬೇರೆ ಸ್ಥಳ ನೋಡಿ ಅವರಿಗೆ ಆ ಸ್ಥಳದಿಂದ ವರ್ಗಾವಣೆ ಮಾಡತಕ್ಕದ್ದು ಮತ್ತೊಂದು ಈ ಎರಡು ವಿಷಯವನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ಟಿ. ಆರ್. ಶಾಮಣ್ಣ :—ಸ್ವಾಮಿ, ಈ ಪೆಟ್ಟಿಗೆ ಅಂಗಡಿಗಳು ಪ್ರಭಾವದಿಂದ, ದುಡ್ಡಿನ ಸಹಾಯದಿಂದ ಬಂದಿರುವಂತಹ ಅಂಗಡಿಗಳು. ನಮ್ಮ ಮಿತ್ರರಾದ ಲಕ್ಷ್ಮಣ್ ಅವರು ಇವರಿಗೆ ದೂರ ಕೊಡಬೇಡಿ. ಹತ್ತಿರದಲ್ಲಿ ಕೊಡಿ ಎಂದು ಹೇಳಿದರು. ಇವೊತ್ತು ಕಬ್ಬನ್‌ಪಾರ್ಕ್‌ನಲ್ಲಿ ಸ್ಥಳ ಇದೆ, ರೇಸ್‌ಕೋರ್ಸ್‌ನಲ್ಲಿ ಸ್ಥಳ ಇದೆ, ಅಲ್ಲಿ ಹೋಗಿ ಅಂಗಡಿ ಹಾಕಿಕೊಂಡರೆ ಅದಕ್ಕೂ ಅವಕಾಶ ಕೊಡುತ್ತೀರಾ ಅಥವಾ ಕಿತ್ತುಹಾಕುತ್ತೀರಾ?

ಶ್ರೀ ಹೆಚ್. ಸಿ. ಶ್ರೀಕಂಠಯ್ಯ :—ಕಬ್ಬನ್‌ಪಾರ್ಕ್‌ನಲ್ಲಿ ಕಟ್ಟಬೇಕಾದರೆ, ಅದು ಸರ್ಕಾರಕ್ಕೆ ಗೊತ್ತಿದೆ. ಈಗ ಅಲ್ಲಿರತಕ್ಕವರು ಬಹಳ ದಿವಸದಿಂದ ಪೆಟ್ಟಿಗೆ ಅಂಗಡಿಗಳನ್ನು ಇಟ್ಟುಕೊಂಡು ವ್ಯಾಪಾರ ಮಾಡುತ್ತಿದ್ದಾರೆ. ಅವರನ್ನು ಓಡಿಸುವುದು ಹೇಗೆ ಅವರನ್ನು ಎವಿಕ್ಟ್ ಮಾಡಿಸಿ ಬೇರೆ ಸ್ಥಳ ಕೊಡುವುದೂ ಸರ್ಕಾರದ ಕರ್ತವ್ಯ. ಕಬ್ಬನ್ ಪಾರ್ಕ್‌ನಲ್ಲಿ, ರೇಸ್‌ಕೋರ್ಸ್‌ನಲ್ಲಿ ಅಂಗಡಿಗಳನ್ನು ಹಾಕಿಸಬೇಕೆಂಬ ಉದ್ದೇಶ ಅಲ್ಲ.

ಶ್ರೀ ಐ.ಪಿ.ಡಿ. ಸಾಲಪ್ಪ :—ಮಾನ್ಯ ಶಾಮಣ್ಣನವರು ಬೆಂಗಳೂರು ನಗರದ ಸೌಂದರ್ಯವನ್ನು ಮಾತ್ರ ನೋಡುತ್ತಿದ್ದಾರೆ. ಈಗ ಅಲ್ಲಿ ನೂರಾರು ಜನ ಬಡವರು ವ್ಯಾಪಾರ ಮಾಡಿ ಜೀವನ ಮಾಡುವವರಿದ್ದಾರೆ. ಆದರಿಂದ ಬಡವರಿಗೂ ಅನುಕೂಲವಾಗಿದೆ, ಪ್ರಯಾಣಿಕರಿಗೂ ಅನುಕೂಲವಾಗಿದೆ ಆದುದರಿಂದ ಅಲ್ಲಿರತಕ್ಕವರನ್ನು ಬೇರೆ ಕಡೆಗೆ ಹಾಕಿದರೆ ಬಹಳ ತೊಂದರೆಯಾಗುತ್ತದೆ. ಅದರ ಬದಲು ಕಾರ್ಪೊರೇಷನ್‌ನಿಂದಲೇ ಅಂಗಡಿ ಮಳಿಗೆಗಳನ್ನು ಕಟ್ಟಿಸಿ ಈಗ ಅಲ್ಲಿ ಯಾರು ಇದ್ದಾರೆ ಅವರಿಗೆ ಪಾಯಂ ಆಗಿ ಬಾಡಿಗೆಗೆ ಕೊಟ್ಟು ಏತಕ್ಕೆ ಸಂಪಾದನೆ ಮಾಡಬಾರದು?

ಶ್ರೀ ಹೆಚ್. ಸಿ. ಶ್ರೀಕಂಠಯ್ಯ :—ಮಾನ್ಯ ಸದಸ್ಯರು ಇದನ್ನು ಹೇಳುವುದಕ್ಕೆ ಮುಂಚೆಯೇ ನಾನು ಹೇಳಿದ್ದೇನೆ.